ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 18–8–2017

# ಪತ್ರಿಕಾ ಆಮಂತ್ರಣ

**1.** ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಎನ್‌ಜಿಓಗಳಿಗೆ ತರಬೇತಿ ಕಾರ್ಯಕ್ರಮ:

ಉದ್ಘಾಟನೆ:

ತನ್ವೀರ್ ಸೇಠ್,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ದಿನಾಂಕ: 19–8–2017 ಶನಿವಾರ ಸಮಯ: ಬೆಳಿಗ್ಗೆ: 10–00 ಗಂಟೆಗೆ

ಸ್ಥಳ: ದೇವರಾಜ ಅರಸು ಭವನ ಸಭಾಂಗಣ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು

2. ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ:
ಘನ ಉಪಸ್ಥಿತಿ:
ಡಿ.ವಿ. ಸದಾನಂದಗೌಡ, ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು
ಉದ್ಘಾಟನೆ:
ರಾಮಲಿಂಗಾರೆಡ್ಡಿ,
ಸಾರಿಗೆ ಸಚಿವರು
ಮುಖ್ಯ ಅತಿಥಿಗಳು:
ಕೆ.ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಸಚಿವರು,
ದಿನಾಂಕ: 19–8–2017 ಶನಿವಾರ ಸಮಯ: ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಸಿಎ–15 ಎನ್.ಜಿ.ಇ.ಎಫ್ ಪೂರ್ವ, ಕಸ್ತೂರಿ ನಗರ, ಬೆಂಗಳೂರು –43

3. ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಬೊಮ್ಮನಹಳ್ಳಿ ವಾರ್ಡ್ –175 ದೇವರಚಿಕ್ಕನಹಳ್ಳಿಯಲ್ಲಿ "ಬಂಡೆ ಉದ್ಯಾನವನದ(Stone Park)

ಉದ್ಘಾಟನೆ:

ಕೆ.ಜೆ. ಜಾರ್ಜ್,
ಬೆಂಗಳೂರು ಅಭಿವೃದ್ಧಿ ಸಚಿವರು

ದಿನಾಂಕ: 19-8-2017 ಶನಿವಾರ ಸಮಯ: ಸಂಜೆ 6-00 ಗಂಟೆಗೆ

ಸ್ಥಳ: ದೇವರಚಿಕ್ಕನಹಳ್ಳಿ, ಬೊಮ್ಮನಹಳ್ಳಿ ವಾರ್ಡ್ -175, ಬೆಂಗಳೂರು

## ಪತ್ರಿಕಾ ಪ್ರಕಟಣೆ

**72/72**

# NIOS ಪೋರ್ಟಲ್‌ನಲ್ಲಿ ವೃತ್ತಿ ತರಬೇತಿ ಹೊಂದಿರದ ಸೇವಾನಿರತ ಶಿಕ್ಷಕರ ನೋಂದಣಿಗೆ ಸೆಪ್ಟೆಂಬರ್ 15 ಕೊನೆಯ ದಿನ

ಬೆಂಗಳೂರು ಆಗಸ್ಟ್ 18(ಕರ್ನಾಟಕ ವಾರ್ತೆ)

ವೃತ್ತಿ ತರಬೇತಿ ಹೊಂದಿರದ ಸೇವಾ ನಿರತ ಶಿಕ್ಷಕರು 31-3-2019 ರೊಳಗೆ ಅಗತ್ಯ ವಿದ್ಯಾರ್ಹತೆಯನ್ನು ಹೊಂದಲು ಕೊನೆಯ ಅವಕಾಶ ಮಾಡಿಕೊಡಲಾಗಿದ್ದು NIOS ಪೋರ್ಟಲ್‌ನಲ್ಲಿ ಕೋರ್ಸಿಗೆ ಆನ್‌ಲೈನ್‌ನಲ್ಲಿ ಸೆಪ್ಟೆಂಬರ್ 15 ರೊಳಗೆ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ನಿರ್ದೇಶಕರು (ಕಾರ್ಯಕ್ರಮಗಳು) ಸರ್ವ ಶಿಕ್ಷಣ ಅಭಿಯಾನ -ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್.ಸಿ.ಟಿ.ಇ. ನಿಯಮಾನುಸಾರ ಸರ್ಕಾರಿ/ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ವೃತ್ತಿ ಸಂಬಂಧಿಸಿದ ವಿದ್ಯಾರ್ಹತೆಯನ್ನು ಹೊಂದುವುದು ಅಗತ್ಯವಾಗಿರುತ್ತದೆ ಎಂದು ಶಿಕ್ಷಣ ಹಕ್ಕು ಕಾಯ್ದೆ ಗೊತ್ತುಪಡಿಸಿರುತ್ತದೆ.

ಆರ್.ಟಿ.ಇ. ಕಾಯ್ದೆ ಸೆಕ್ಷನ್ 23(2) ಕ್ಕೆ ಮಾಡಲಾದ ತಿದ್ದುಪಡಿಯು ಸಂಸತ್ತಿನಲ್ಲಿ ಅನುಮೋದಿತವಾಗಿದ್ದು, ಅದರಂಗತೆ ವೃತ್ತಿ ಸಂಬಂಧಿಸಿದ ವಿದ್ಯಾರ್ಹತೆಯನ್ನು ಹೊಂದದೆ ಕಾರ್ಯನಿರ್ವಹಿಸುತ್ತಿರುವ ಸೇವಾ ನಿರತ ಶಿಕ್ಷಕರಿಗೆ ಅಗತ್ಯ ವಿದ್ಯಾರ್ಹತೆಯನ್ನು ದಿನಾಂಕ: 31-3-2019 ರೊಳಗೆ ಹೊಂದಲು ಕೊನೆಯ ಅವಕಾಶ ಮಾಡಿಕೊಡಲಾಗಿದೆ.

ಅಗತ್ಯ ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲದ ಶಿಕ್ಷಕರು ದಿನಾಂಕ 31-3-2019 ರೊಳಗೆ ಕನಿಷ್ಠ ವಿದ್ಯಾರ್ಹತೆಗಳಿಸಿಕೊಳ್ಳುವುದು ಅಗತ್ಯ. ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಡಿಇಡಿ ಕೋರ್ಸಿಗೆ ದಾಖಲಾಗದವರು NIOS ಮೂಲಕ ವಿದ್ಯಾರ್ಜನೆ ಪಡೆಯಬಹುದಾಗಿದೆ. NIOS ಪೋರ್ಟಲ್‌ನಲ್ಲಿ ಕೋರ್ಸಿಗೆ ನೋಂದಣಿಯನ್ನು ದಿನಾಂಕ: 16-8-2017 ರಿಂದ 15-9-2017 ರೊಳಗೆ ಮಾಡಿಕೊಳ್ಳಬಹುದು. ಯಾರು ಈ ಹಂತದಲ್ಲಿ ದಾಖಲಾಗುವುದಿಲ್ಲವೋ ಅವರು ಕೋರ್ಸ್‌ನ್ನು ದಿನಾಂಕ: 31-3-2019 ರೊಳಗೆ ಪೂರ್ಣಗೊಳಿಸಲು ಸಾಧ್ಯವಿಲ್ಲ ಹಾಗೂ ತಕ್ಷಣದಿಂದ ಶಿಕ್ಷಕರಾಗಿ ಮುಂದುವರೆಯುವುದು ಸ್ಥಗಿತಗೊಳ್ಳುತ್ತದೆ.

ಸೇವಾನಿರತ ಶಿಕ್ಷಕರು ಈಗಾಗಲೇ ಅಗತ್ಯ ವಿದ್ಯಾರ್ಹತೆ ಪಡೆಯಲು ನೋಂದಣಿ ಮಾಡಿಕೊಂಡಿದ್ದಲ್ಲಿ ಮತ್ತೊಮ್ಮೆ ಆನ್‌ಲೈನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡುವ ಅವಶ್ಯಕತೆ ಇರುವುದಿಲ್ಲ. ಆದರೆ ದಿನಾಂಕ: 31-3-2019 ರೊಳಗೆ ಈ ವಿದ್ಯಾರ್ಹತೆಯನ್ನು ಪಡೆಯಬೇಕಾಗಿರುತ್ತದೆ.

ವೃತ್ತಿಗೆ ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರದ ಶಿಕ್ಷಕರು ಅಗತ್ಯವಿರುವ NIOS ವತಿಯಿಂದ ನಡೆಸಲಾಗುವರ D.El.Ed ಕೋರ್ಸು ಪೂರ್ಣಗೊಳಿಸುವ ಮುಂಚಿತವಾಗಿ ಪಿ.ಯು.ಸಿ.ಯಲ್ಲಿ ಪುನರ್ ಪರೀಕ್ಷೆಯನ್ನು ತೆಗೆದುಕೊಂಡು ಶೇ. 50 ರಷ್ಟು ಅಂಕಗಳನ್ನು ಗಳಿಸಬೇಕಾಗುತ್ತದೆ. +2 ಶಿಕ್ಷಣದಲ್ಲಿ ಶೇ. 50 ರಷ್ಟು ಅಂಕಗಳಿಸಿದ ಶಿಕ್ಷಕರಿಗೆ ಮಾತ್ರವೇ D.El.Ed ಪ್ರಮಾಣಪತ್ರವನ್ನು ನೀಡಲಾಗುತ್ತದೆ.

ಒಂದು ವೇಳೆ ಶಿಕ್ಷಕರು 15-9-2017 ರೊಳಗೆ ನೋಂದಣಿ ಮಾಡಿಸದಿದ್ದಲ್ಲಿ ಅವರು ಸೇವೆಯಿಂದ ತಕ್ಷಣ ತೆಗೆದುಹಾಕುವ /ವಜಾಗೊಳಿಸುವ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದು ನಿರ್ದೇಶಕರು (ಕಾರ್ಯಕ್ರಮಗಳು) ಸರ್ವ ಶಿಕ್ಷಣ ಅಭಿಯಾನ -ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

73/73

## ಡಿ. ದೇವರಾಜ ಅರಸು 102 ನೇ ಜನ್ಮದಿನಾಚರಣೆ

ಬೆಂಗಳೂರು ಆಗಸ್ಟ್ 18(ಕರ್ನಾಟಕ ವಾರ್ತೆ)

ಪ್ರಗತಿಪರ ಸಾಧನೆಗಳ ಸರದಾರ, ಸಾಮಾಜಿಕ ಪರಿವರ್ತನೆಯ ಹರಿಕಾರ ಡಿ. ದೇವರಾಜ ಅರಸು ಅವರು 102 ನೇ ಜನ್ಮ ದಿನಾಚರಣೆಯನ್ನು ಆಗಸ್ಟ್ 20 ರಂದು ಬೆಳಿಗ್ಗೆ 10–40 ಗಂಟೆಗೆ ವಿಧಾನ ಸೌಧದ ಪಶ್ಚಿಮ ದ್ವಾರ ಇಲ್ಲಿ ಆಚರಿಸಲಾಗುವುದು.

ಅಂದು ಡಿ. ದೇವರಾಜ ಅರಸು ಅವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ಮಾಲಾರ್ಪಣೆ ಮಾಡುವರು.

ವಿಧಾನ ಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬೆಳಿಗ್ಗೆ 11–00 ಗಂಟೆಗೆ ಮುಖ್ಯಮಂತ್ರಿ ಅವರು ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡುವರು. ಸಮಾರಂಭದ ಅಧ್ಯಕ್ಷತೆಯನ್ನು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವ ಹೆಚ್. ಆಂಜನೇಯ ಅವರು ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

74/74

## ಮಲ್ಲೇಶ್ವರಂ, ನಂದಿನಿ ಬಡಾವಣೆ ಹಾಗೂ ರಾಜಾಜಿನಗರ ಶಾಖಾ ಗ್ರಂಥಾಲಯ ಸೇವೆ ತಾತ್ಕಾಲಿಕ ಸ್ಥಗಿತ

ಬೆಂಗಳೂರು ಆಗಸ್ಟ್ 18(ಕರ್ನಾಟಕ ವಾರ್ತೆ)

ನಗರ ಕೇಂದ್ರ ಗ್ರಂಥಾಲಯ, ಉತ್ತರವಲಯ, ಮಲ್ಲೇಶ್ವರಂ, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿ ಬರುವ ಶಾಖಾ ಗ್ರಂಥಾಲಯಗಳಾದ ಮಲ್ಲೇಶ್ವರಂ, ನಂದಿನಿ ಬಡಾವಣೆ ಹಾಗೂ ರಾಜಾಜಿನಗರ ಗ್ರಂಥಾಲಯಗಳಲ್ಲಿ ವಾರ್ಷಿಕ ಪುಸ್ತಕ ದಾಸ್ತಾನು ತಪಾಸಣೆ ಕಾರ್ಯ ನಡೆಸುತ್ತಿರುವುದರಿಂದ ಗ್ರಂಥಾಲಯದ ಎರವಲು ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

75/75

## ರೈತರಿಗೆ ಸಲಹೆ

ಬೆಂಗಳೂರು ಆಗಸ್ಟ್ 18(ಕರ್ನಾಟಕ ವಾರ್ತೆ)

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ ವಾರದಲ್ಲಿ ಅಂದರೆ ಆಗಸ್ಟ್ 1 ರಿಂದ 17 ರವರೆಗೆ, ಶೇ. 174 ಹಾಗೂ ಶೇ. 48 ರಷ್ಟು ವಾಡಿಕೆಗಿಂತ ಅಧಿಕ ಮಳೆಯನ್ನು ಪಡೆದಿದ್ದು ಇದುವರೆವಿಗೂ ಶೇ. 47 ಹಾಗೂ 54 ರಷ್ಟು ಬಿತ್ತನೆಯಾಗಿದ್ದು, ಆಗಸ್ಟ್ ಕೊನೆಯವಾರದವರೆಗೆ ರಾಗಿ ಬೆಳೆ ಬಿತ್ತುವ ವಾಡಿಕೆಯಿದ್ದು ರಾಗಿ ಬೆಳೆಯಲ್ಲಿ, ಅಲ್ಪಾವಧಿ ತಳಿಗಳಾದ ಎಂ.ಎಲ್. 365 ಮತ್ತು ಜಿ.ಪಿ.ಯು 28,48 ಬೆಳೆಯಲು ಕೃಷಿ ಇಲಾಖೆಯು ರೈತರಿಗೆ ಸಲಹೆ ನೀಡಿದೆ.

ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ರಾಗಿ ಹಾಗೂ ನವಣೆ ಬಿತ್ತನೆ ಬೀಜ ದಾಸ್ತಾನು ಇರಿಸಲಾಗಿದೆ. ರೈತರು ಸದುಪಯೋಗ ಪಡೆಯಲು ಕೋರಿದೆ. ಮುಂದಿನ ಒಂದು ವಾರದವರೆಗೆ ಚದುರಿದಂತೆ ಸಾಧಾರಣ ಮಳೆ ಆಗುವ ಸಂಭವವಿದ್ದು ಸೆಪ್ಟೆಂಬರ್ ಮಾಹೆಯಲ್ಲಿ ಸಿರಿಧಾನ್ಯ ಬೆಳೆಗಳಾದ ನವಣೆ, ಆರ್ಕ ಸಜ್ಜೆ ಬಿತ್ತನೆ ಮಾಡಲು ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಲ್ಪಸಂಖ್ಯಾತರ ಯೋಜನೆಗಳ ಕೈಪಿಡಿ ಬಿಡುಗಡೆ

76/76

ಬೆಂಗಳೂರು ಆಗಸ್ಟ್ 18(ಕರ್ನಾಟಕ ವಾರ್ತೆ)

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು (ಕರ್ನಾಟಕ ಸರ್ಕಾರ ಸ್ವಾಮ್ಯದ ಉದ್ಯಮ) ರಾಜ್ಯದ ಮತೀಯ ಅಲ್ಪಸಂಖ್ಯಾತರಾದ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್‌ರು ಮತ್ತು ಪಾರ್ಸಿ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕಾಭಿವೃದ್ಧಿಗಾಗಿ 1986ರಲ್ಲಿ ಸ್ಥಾಪನೆಯಾಗಿರುತ್ತದೆ.

ರಾಜ್ಯ ಸರ್ಕಾರವು 2017–18ನೇ ಸಾಲಿನ ಆಯವ್ಯಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಒಟ್ಟು 2145.13 ಕೋಟಿ.ರೂಪಾಯಿಗಳನ್ನು ಒದಗಿಸಿದ್ದು, ಇದು ಗಣನೀಯ ಹೆಚ್ಚಳವಾಗಿದೆ(substantial increase).ಇದರ ಪೈಕಿ 330.00 ಕೋಟಿ ರೂಪಾಯಿಗಳು ನಿಗಮದ ಪಾಲಿಗೆ ಬಂದಿರುತ್ತದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅಲ್ಪಸಂಖ್ಯಾತರ ಪ್ರಯೋಜನಕ್ಕಾಗಿ ಹಲವಾರು ಯೋಜನೆಗಳಡಿಯಲ್ಲಿ ಅತಿ ಕಡಿಮೆ ಬಡ್ಡಿದರದಲ್ಲಿ ಮತ್ತು ಸುಲಭ ಕಂತುಗಳ ಮೂಲಕ ಮರುಪಾವತಿಸುವ ಸಲುವಾಗಿ, ಸಾಲ ಸೌಲಭ್ಯವನ್ನು ಸಹಾಯಧನದೊಂದಿಗೆ ನೀಡುತ್ತಿದೆ. ನಿಗಮದ ಯೋಜನೆಗಳ ವಿವರಗಳನ್ನೊಳಗೊಂಡ 'ಕೈಪಿಡಿ'ಯನ್ನು ಪ್ರಾಥಮಿಕ ಮತ್ತು

ಪ್ರೌಢಶಿಕ್ಷಣ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟನೆ ಮಾಡಿದ ನಂತರ ವಿತರಣೆ ಮಾಡಲಾಗುವುದು.

ಕಳೆದ 03 ವರ್ಷಗಳ ಅವಧಿಯಲ್ಲಿ, 638.56 ಕೋಟಿ ರೂಪಾಯಿಗಳ ಆಯವ್ಯಯ ಹಂಚಿಕೆಗೆ ಪ್ರತಿಯಾಗಿ ನಿಗಮವು 703.56ಕೋಟಿ ರೂಪಾಯಿಗಳ ಸಾಧನೆ ಮಾಡಿರುತ್ತದೆ.

ಮುಖ್ಯಮಂತ್ರಿಯವರು ಅವರ 2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕೆಳಕಂಡ 06 ಹೊಸ ಯೋಜನೆಗಳನ್ನು ಘೋಷಿಸಿರುತ್ತಾರೆ. ಇವುಗಳು ಗ್ರಾಮೀಣ ಪ್ರದೇಶದ ಅಲ್ಪಸಂಖ್ಯಾತ ಸಮುದಾಯದ ರೈತರ ಹಾಗೂ ಗ್ರಾಮೀಣ ಅಲ್ಪಸಂಖ್ಯಾತ ಮಹಿಳೆಯರ ಸ್ಥಿತಿಗತಿಯನ್ನು ಉತ್ತಮ ಪಡಿಸುತ್ತದೆ ಮತ್ತು ಅತಿತೊಂದರೆಗೆ(distress) ಒಳಗಾದ ಅಲ್ಪಸಂಖ್ಯಾತರಿಗೆ ಸಹಕಾರಿಯಾಗುತ್ತದೆ.

(1) ಹಸು, ಕುರಿ, ಮೇಕೆ ಮುಂತಾದ ಸಾಕಪ್ರಾಣಿಗಳನ್ನು ಖರೀದಿಸಲು ಸಾಲಸೌಲಭ್ಯ.
(2) ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಸಲು ಸಹಾಯಧನ
(3) ಅಲ್ಪಸಂಖ್ಯಾತರೈತರಯೋಜನೆ
(4) 'ಮನೆ ಮಳಿಗೆ'ಯೋಜನೆ
(5) ಆಟೋ ಸರ್ವೀಸ್, ಆಟೋಮೊಬೈಲ್, ಬಿದರಿ ಮತ್ತುರೇಷ್ಮೆ ಚಟುವಟಿಕೆಗಳಿಗೆ ತರಬೇತಿ
ಮತ್ತು ಮೂಲಸೌಲಭ್ಯದ ಬೆಂಬಲ ಯೋಜನೆ
(6) ಕೊಲ್ಲಿ ರಾಷ್ಟ್ರಗಳಿಂದ ಅಂತಿಮವಾಗಿ ವಾಪಸ್ಸು ಬಂದಿರುವ ಮತ್ತು ನಿರುದ್ಯೋಗಿಗಳಾಗಿರುವ
ಅಲ್ಪಸಂಖ್ಯಾತರಿಗೆ ಸ್ವಯಂ–ಉದ್ಯೋಗಯೋಜನೆಗಾಗಿ ಸಾಲಸೌಲಭ್ಯ

ಮೇಲಿನ ಯೋಜನೆಗಳು ಈಗ ಚಾಲ್ತಿಯಲ್ಲಿರುವ'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ, 'ಶ್ರಮಶಕ್ತಿ'ಯೋಜನೆ, ಗಂಗಾ ಕಲ್ಯಾಣಯೋಜನೆ, ಸ್ವಯಂ–ಉದ್ಯೋಗಕ್ಕಾಗಿ ಸಹಾಯಧನಯೋಜನೆ, ಭೂಖರೀದಿ ಯೋಜನೆ, ಕಿರು (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆಗಳಿಗೆ ಹೊಸ ಸೇರ್ಪಡೆಯಾಗಿರುತ್ತವೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ದಿನಾಂಕ 19ನೇ ಆಗಸ್ಟ್ 2017ನೇ ಶನಿವಾರದಂದು'ತರಬೇತಿದಾರರಿಗೆತರಬೇತಿ'(Training of Trainers) ಕಾರ್ಯಕ್ರಮವನ್ನು ಡಿ.ದೇವರಾಜ ಅರಸು ಭವನದ ಆಡಿಟೋರಿಯಂ, ಮಿಲ್ಲರ್ಸ್‌ಟ್ಯಾಂಕ್ ಬಂಡ್‌ಏರಿಯಾ, ವಸಂತನಗರ, ಬೆಂಗಳೂರು, ಇಲ್ಲಿ ಆಯೋಜಿಸುತ್ತಿದ್ದು, ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ (NGOs) ನಿಗಮದಿಂದ ಸಾಲಸೌಲಭ್ಯ ಪಡೆಯುವ ಸಲುವಾಗಿ ನಿಗಮದ ಯೋಜನೆಗಳ ವಿವರಗಳನ್ನು ನೀಡಲಾಗುತ್ತದೆ. ಇದರಿಂದಾಗಿ, ಅಂತಹ ಸರ್ಕಾರೇತರ ಸಂಸ್ಥೆಗಳು ಅವುಗಳೊಂದಿಗೆ ಕಾರ್ಯನಿರತವಾಗಿರುವ ಭಾಗೀದಾರ ಸರ್ಕಾರೇತರ

ಸಂಸ್ಥೆಗಳಿಗೆ (Partner NGOs) ಮತ್ತು ಅಲ್ಪಸಂಖ್ಯಾತರಿಗೆ ಯೋಜನಾವಾರು ಮಾಹಿತಿಯನ್ನು ನೀಡುತ್ತದೆ.

ಇಂತಹ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಅಲ್ಪಸಂಖ್ಯಾತರ ಏಳಿಗೆಗಾಗಿ ಅನುಷ್ಠಾನಗೊಳ್ಳುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಗಳು ಆರ್ಥಿಕವಾಗಿ ದುರ್ಬಲರಾದ ಅಲ್ಪಸಂಖ್ಯಾತರಿಗೆ ತಲುಪುವಲ್ಲಿ ಸಹಕಾರಿಯಾಗುತ್ತವೆ ಎಂದು ಆಶಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಪ್ರತಿಷ್ಠಾನವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಮತ್ತು ಬ್ಯಾಂಕ್ ಮೂಲಕ ದೊರೆಯುವ ಸಾಲಸೌಲಭ್ಯದ ಬಗ್ಗೆ ತಿಳಿಸಲಾಗುತ್ತದೆ.

ಕರ್ನಾಟಕ ಜರ್ಮನ್ ಟೆಕ್ನಿಕಲ್‌ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು, ಸಂಸ್ಥೆಯು, ಅಲ್ಪಸಂಖ್ಯಾತ ಸಮುದಾಯದ ಯುವಕ/ಯುವತಿಯರಿಗಾಗಿ ಹಮ್ಮಿಕೊಂಡಿರುವ ವಿವಿಧ ವೃತ್ತಿಪರ ಕೌಶಲ್ಯ ಅಭಿವೃದ್ಧಿಯೋಜನೆ ಬಗ್ಗೆ ಮಾಹಿತಿಯನ್ನು ಈ ಕಾರ್ಯಕ್ರಮದಲ್ಲಿ ನೀಡಲಾಗುತ್ತದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ಪ್ರಕಟಣೆ ತಿಳಿಸಿದೆ.

77/77

**A 'Hand Book' containing the details of the Minorities Schemes**

**Bangalore, August 18(Karnataka Information)**

**Karnataka Minorities Development Corporation Ltd., (Government of Karnataka Undertaking), Bangalore, has been established during 1986 for the social, educational and economic upliftment of religious minorities of the State viz., Muslims, Chistians, Jains, Buddhists, Sikhs and Parsis.**

**The Government in its Budget for the year 2017-18, has allocated a sum of Rs.2145.13 Crores for the minority development which is a substantial increase. Of this, Rs.330.00 Crores is the share of KMDC.**

**KMDC is extending loans under various Schemes at low rate of interest and with easy terms of repayment, along with subsidy to ensure that the minorities are benefited. A 'Hand Book' containing**

**the details of the Schemes will be circulated after release by the Minister for Primary &Secondary Education, Minorities Welfare and Auqafand Raichur District In charge Minister during the last03 years, as against the Budget allocation of Rs.638.56 Crores. The Corporation has made an achievement of Rs.703.56 Crores.**

**The Chief Minister has announced in his Budget speech for the year 2017-18, the following new Schemes which will majorly impact the rural minority farmers and rural minority women and also, help those who are very much in distress.**

(7)Loan for purchase of domestic animals like cow, sheep, goat etc.
(8) Subsidy for purchase of taxi/goods vehicle
(9) Minority Farmers' Scheme
**(4) 'Mane Malige' Scheme**

**(5) Training and infrastructure support for Auto service,**

**Automobiles, Bidri and Silk activities**

(10) Loan Schemefor self-employment for Gulf returnees

**These are in addition to the existing Schemes of 'Arivu' (Education Loan) Scheme, 'Shramashakthi' Scheme, Ganga Kalyana Scheme, Subsidy Scheme for self-employment, Land Purchase Scheme, Micro Loanwith Subsidy Scheme.**

**Karnataka Minorities Development Corporation is organising 'Training of Trainers' Programme on Saturday, the 19th August 2017 at D.DevarajUrsBhavan Auditorium, Millers Tank Bund Area, Vasanthanagar, Bangalore, whereby Non-Governmental Organisations (NGOs) who are working for the welfare of minority groups, will be informed of the Scheme details for availing loans, so that they can, in turn, convey the information to their partner NGOs and minority beneficiaries with whom they work.**

It is hoped that the Government Schemes of the Minority Welfare Department which are meant primarily for the economically weak, will reach them with the help of these NGOs. Information about the Schemes of KMDC, Schemes of Directorate of Minorities, Schemes of Karnataka State Wakf Women Foundation and Bank linked Schemes will be given in the said programme.

Information on Skill Development Training conducted by Karnataka German Technical Training Institute, Bangalore, for different technical trades, for the benefit of minority youth will also be given.

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

78/78

ಬೆಂಗಳೂರು ಆಗಸ್ಟ್ 18(ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆದೇಶ ಮತ್ತು ಸಲಹೆಯಂತೆ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 20–08–2017ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ ಶೀರ್ಷಿಕೆಯಡಿ ಶ್ರೀ. ಸೂರ್ಯಕಾಂತ ಮತ್ತು ತಂಡ, ಕಲಬುರ್ಗಿ ರವರಿಂದ ಜಾನಪದ ಗೀತೆಗಳ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) **ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ** ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" **ಎಂಬ ಶೀರ್ಷಿಕೆಯಡಿ** ಶ್ರೀ. ಹೊಂಬಾಳಯ್ಯ ಮತ್ತು ತಂಡ, ಚನ್ನಪಟ್ಟಣ ರವರಿಂದ ರಂಗಗೀತೆ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

3) **ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ** ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು **ಏರ್ಪಡಿಸಲಾಗಿದೆ.**

4) **ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು** ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ **ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.**

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- **ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ** ಯೂನಿವರ್ಸ್ ಆರ್ಟ್ ಫೌಂಡೇಶನ್, **ಬೆಂಗಳೂರು ಸಂಸ್ಥೆಯ ಸಹಯೋಗದೊಂದಿಗೆ** ಕಲಾಯೋಗಿ ಪುಲಕೇಶಿ ಕಸ್ತೂರಿ ಶಾಂತಲಾ ಆರ್ಟ್ ಅಕಾಡೆಮಿಯ ರವರಿಂದ ಭರತನಾಟ್ಯ **ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ** ಶ್ರೀವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ, ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು **ಏರ್ಪಡಿಸಲಾಗಿದೆ.**

**II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ**

ಬೆಳಿಗ್ಗೆ 6.30 ರಿಂದ ಬೆಳಿಗ್ಗೆ 10.00 ಗಂಟೆಯವರೆಗೆ ದಿ ಹಿಂದೂ ಗ್ರೂಪ್ ವತಿಯಿಂದ **"ಸೈಕಲ್ ಡೇ"** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಜುಂಬಾ, ಯೋಗಾ, ಸೈಕಲ್ ರ್‍ಯಾಲಿ, ರೀಡಿಂಗ್ ಜೋನ್ ಹಾಗೂ ಇತರೇ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

- ಬೆಳಿಗ್ಗೆ 7.00 ರಿಂದ ಬೆಳಿಗ್ಗೆ 11.00 ಗಂಟೆಯವರೆಗೆ Dr. Batra's, Bangalore ರವರ ವತಿಯಿಂದ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಉತ್ತಮ ಆರೋಗ್ಯಕ್ಕಾಗಿ ಉಚಿತ ಸಲಹೆಯನ್ನು ನೀಡುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಛಾಯಾಚಿತ್ರ ಶೀರ್ಷಿಕೆ:

ಇಂದು ನಿಧನರಾದ ಶತಾಯುಷಿ ರಂಗಭೂಮಿ ದಿಗ್ಗಜ ಏನಗಿ ಬಾಳಪ್ಪ ಅವರ ಅಪರೂಪದ ಕೆಲವು ಛಾಯಾಚಿತ್ರಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಚಿತ್ರ ಸಂಗ್ರಹದಿಂದ

1. ಬೆಳ್ಳಿತೆರೆಯ ಹಿರಿಯ ನಟ ಅಶ್ವಥ್ ಅವರೊಂದಿಗೆ
2. ವರನಟ ಡಾ: ರಾಜ್‌ಕುಮಾರ್ ಅವರಿಗೆ ರಂಗನಮನ
3. ಬೆಳ್ಳಿತೆರೆಯ ಹಿರಿಯ ನಟ ಅಶ್ವಥ್ ಹಾಗೂ ಚೆಂಬಳಕಿನ ಕವಿ ಚನ್ನವೀರಕಣವಿ ಅವರೊಂದಿಗೆ
4. ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಖ್ಯಾತ ಹಿಂದೂಸ್ತಾನಿ ಗಾಯಕಿ ಗಂಗೂಬಾಯಿ ಹಾನಗಲ್ ಅವರೊಂದಿಗೆ
5. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣ ಮಾಡಿದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರಿಂದ ಸನ್ಮಾನ ಸ್ವೀಕರಿಸುತ್ತಿರುವ ಏಣಗಿ ಬಾಳಪ್ಪ